ಆ)

	ಪ್ರಾಥಮಿಕ ಶಾಲೆ	ಪ್ರೌಢಶಾಲೆ
ಒಟ್ಟು ಶಿಕ್ಷಕರ ಸಂಖ್ಯೆ	557	63
ತುಂಬಬೇಕಾಗಿರುವ ಶಿಕ್ಷಕರ ಸಂಖ್ಯೆ	63	ಇಲ್ಲ

ಇ) ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿಯಾಗುತ್ತಿದ್ದು ಇದು ಆದ ಕೂಡಲೇ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಪ್ರೌಢಶಾಲೆಗಳಲ್ಲಿ ಖಾಲಿ ಹುದ್ದೆಗಳು ಇಲ್ಲದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ದ. ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ವಿದ್ಯುತ್ ಸಬ್ ಸ್ಟೇಷನ್ ಕಾಮಗಾರಿ ಕೆಲಸ.

3262 - ಶ್ರೀ ಜಿ. ಎಸ್. ಆಚಾರ್ (ಬೈಂದೂರ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ವಿದ್ಯುತ್ ಸಬ್-ಸ್ಟೇಷನ್ ಕಾಮಗಾರಿಗೆ ಯಾವಾಗ ಮಂಜೂರಾತಿ ನೀಡಲಾಯಿತು.?

ಆ) ಯಾವಾಗ ಆದರೆ ಕಾರ್ಯಾರಂಭವಾಯಿತು, ಹಾಗೂ ಕಾಮಗಾರಿ ವಿಳಂಬಕ್ಕೆ ಕಾರಣಗಳೇನು?

ಇ) ಬೈಂದೂರು ಪರಿಸರದ ವಿದ್ಯುತ್ ತೊಂದರೆ ನಿವಾರಿಸಲು ಅಲ್ಲಿನ ವಿದ್ಯುತ್ ಉಪಕೇಂದ್ರ ಕಾರ್ಯಾರಂಭವನ್ನು ತ್ವರಿತಗೊಳಿಸಲಾಗುವುದೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):

ಅ) ನವೆಂಬರ್ 1988ರಲ್ಲಿ ಮಂಜೂರಾತಿ ನೀಡಲಾಯಿತು.

ಆ) ಮೇ 1991ರಲ್ಲಿ ಕಾರ್ಯವನ್ನು ಆರಂಭಿಸಲಾಯಿತು. ಕಾಮಗಾರಿಯ ವಿಳಂಬಕ್ಕೆ ಮುಖ್ಯ ಕಾರಣಗಳು :

(1) ಕುಂದಾಪುರದಿಂದ ಬೈಂದೂರಿಗೆ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣಕ್ಕೆ ಜನವರಿ 1989ರಲ್ಲಿ ಕರೆಯಲಾಗಿದ್ದ ಟೆಂಡರು ಅಸಮರ್ಪಕವಾದುದ್ದರಿಂದ ಸ್ವೀಕೃತವಾಗಲಿಲ್ಲ. ಹೀಗಾಗಿ ಪುನ: ಟೆಂಡರ್ ಅನ್ನು ಕರೆಯಬೇಕಾಯಿತು.

(2) ಈ ಮಧ್ಯದಲ್ಲಿ ಬೈಂದೂರಿನಲ್ಲಿ 110 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಗೆ ಬಂದಿತು. ಸದರಿ ಸ್ಥಳದಲ್ಲಿ 110 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪನೆ ಮಾಡುವುದೋ ಅಥವಾ ಈಗಾಗಲೇ ಮಂಜೂರಾಗಿರುವ 33 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪನೆ ಮಾಡುವುದೋ ಎಂಬ ವಿಷಯದಲ್ಲಿ ಮಂಡಳಿಯು ಪರಿಶೀಲಿಸಿ ಅಂತಿಮವಾಗಿ 33 ಕೆ. ವಿ. ಉಪ ಕೇಂದ್ರ ಸ್ಥಾಪನೆ ಮಾಡುವುದೆಂದು ತೀರ್ಮಾನ ತೆಗೆದು ಕೊಳ್ಳುವಲ್ಲಿ ವಿಳಂಬವಾಯಿತು.

ಇ) ಕುಂದಾಪುರದಿಂದ ಬೈಂದೂರಿಗೆ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿದ್ದು, ಕಾರ್ಯವು ಪ್ರಗತಿಯಲ್ಲಿದೆ. ಬಾಕಿ ಉಳಿದಿರುವ ನಿರ್ಮಾಣ ಕಾರ್ಯಗಳನ್ನು ತ್ವರಿತಗೊಳಿಸಲಾಗುತ್ತಿದೆ.